# ಕೊನೆಯ ಮಾತು

# ಸಮಸತ್ತವನ್ನೂ ಒಂದಾಗಿ ಕೂಡಿಸುವುದು

*"ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆ ಮಾಡಿಕೊಂಡಿದ್ದನು. ಅದೇನಂದರೆ ಭೂಪರಲೋಕಗಳಲ್ಲಿ ಇರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬುದೇ ..." (ಎಫೆಸ 1:9, 10).*

*"ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸ ಮಾಡುತ್ತದೆ, ಮತ್ತು ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ. ಆತನು ಎಲ್ಲಾ ಧೊರೆತನಗಳಿಗೂ ಅಧಿಕಾರಿಗಳಿಗೂ ಶಿರಸ್ಸು" (ಕೊಲೊಸ್ಸ 2:9, 10).*

ಕೆಲವೊಂದು ಸಮಯದಲ್ಲಿ ಪ್ರತಿಯೊಬ್ಬ ಪ್ರಸಂಗಿ ಇಲ್ಲವೇ ಬಹಿರಂಗ ಭಾಷಣಕಾರನು "ವೇದಿಕೆಭಯ" ಎಂದು ಸಾಮಾನ್ಯವಾಗಿ ಕರೆಯಲ್ಪಡುವಂಥದ್ದನ್ನು ಎದುರಿಸುತ್ತಾನೆ. ಅವನ ಕೈಗಳ ತಣ್ಣಗಾಗಿ ಜಿಗುಟು ಗಟ್ಟುತ್ತವೆ, ಅವನ ಬಾಯಿ ಒಣಗಿ ಹತ್ತಿಯಂತೆ ಆಗುತ್ತವೆ, ಅವನ ಕಾಲುಗಳು ನಡುಗುತ್ತವೆ, ಅವನ ಹೊಟ್ಟೆಯಲ್ಲಿ ಸುತ್ತಲೂ ಸುತ್ತಲೂ ಪತಂಗದ ಹುಳಗಳು ಹಾರುವಂತಿರುತ್ತದೆ.

ನಾನು ಪ್ರಸಂಗಿಸುತ್ತಿದ್ದ ಒಂದು ಸ್ಥಳದಲ್ಲಿ, ಪೀಠಕ್ಕೆ ಪ್ರತಿಯೊಂದು ಕಡೆಗಳಲ್ಲಿ ಕ್ಯಾಂಡಲ್ ಇರುವದನ್ನು ಗಮನಿಸಿದೆನು. ಈ ಕ್ಯಾಂಡಲುಗಳು ಪ್ರಸಂಗಿಯು ಸುಲಭ ವಾಗಿ ಅವುಗಳನ್ನು ತಲುಪಿ ಅವುಗಳನ್ನು ಹಿಡಿದುಕೊಳ್ಳಲಿಕ್ಕಾಗುವಂತೆ ಸರಿಯಾಗಿ ಹಚ್ಚಲ್ಪಟ್ಟಿದ್ದವು. ಆ ಕ್ಯಾಂಡಿಲುಗಳಿಗಾಗಿ ಉದ್ದೇಶವನ್ನಿಟ್ಟು ಕೊಂಡಿದ್ದ ಉದ್ದೇಶವನ್ನು ನಾನೆಂದೂ ಕೇಳಿರಲಿಲ್ಲ, ಆದರೆ ಅವು ದುರ್ಬಲ ಪ್ರಸಂಗಿಗಾಗಿ ಹಿಡಿದುಕೊಂಡು ತನ್ನನ್ನು ಸ್ಥಿರವಾಗಿಟ್ಟುಕೊಳ್ಳಲಿಕ್ಕೆ ಆದರ್ಶವಾದವುಗಳಾಗಿದ್ದವು.

ಒಬ್ಬ ಪ್ರಸಂಗಿಯು ತಾನು ಪ್ರಸಂಗಿಸಲು ಪ್ರಾರಂಭಿಸಿದಾಗ, ಒಂದು ಸಭೆಯ ಮುಂದೆ ಅವನು ಮಾತಾಡುವ ಭಯದಿಂದ ತುಂಬಿಕೊಂಡನು, ಅವನ ಮೊಣಕಾಲುಗಳು ಒಂದಕ್ಕೊಂದ ಬಡಿಯಲಿಲ್ಲ ಆದರೆ *ಕಳೆದುಹೋದ ಹಾಗೆ* ಕಂಡವು ಎಂದು ಹೇಳಿದನು. ಅವನ ಮೊಣಕಾಲುಗಳು ನಿಯಂತ್ರಣವಿಲ್ಲದೇ ನಡುಗುತ್ತಿದ್ದವು, ಅವು ಒಂದಕ್ಕೊಂದು ಸ್ಪರ್ಶಿಸದೇ ಇದ್ದವು ಎಂದೂ ಹೇಳಿದನು.

ಪ್ರಸಂಗವನ್ನು ಪ್ರಸ್ತುತಪಡಸಲು ಪ್ರಾರಂಭಿಸುವ ಮೊದಲು ಇಲ್ಲವೇ ಬಹಿರಂಗ ಭಾಷಣದ ಮೊದಲು ಬರುವ ಈ ನರದೌರ್ಬಲ್ಯಕ್ಕೆ ಕಾರಣವು *ಮಾತನಾಡುವವನಿಗೆ ತನಗೆ ಯಾವ ಅನುಭವ* ಆಗುವದೆಂಬುದರ ಬಗ್ಗೆ ಅನಿಶ್ಚಿತತೆ ಇರುವುದು. ನುರಿತ ಪ್ರಸಂಗಿಗೆ ಸಂಪೂರ್ಣವಾದ ಸಿದ್ಧತೆ ಮತ್ತು ಕರ್ತನಲ್ಲಿ ವಿಶ್ವಾಸವು ಆ ಅಭದ್ರತೆಯನ್ನು ಆತ್ಮಿಕ ಭರವಸೆಯಿಂದ ಬದಲಾಗಿಡುವುದು.

ಉದ್ವಿಗ್ನಗೊಳ್ಳುವ ಬಹಿರಂಗ ಭಾಷಣಕಾರನಂತೆ ನಾವು ಜೀವಿತವನ್ನು ಹೇಗೆ ಜೀವಿಸ ಬೇಕು ಎಂಬುದರ ಬಗ್ಗೆ ನಾವು ಗಲಿಬಿಲಿಗೊಂಡಾಗ, ವ್ಯಾಕುಲರೂ ಅನಿಶ್ಚಿತತೆಯುಳ್ಳವರೂ ಆಗುತ್ತೇವೆ. ನಿರಾಶೆಗೊಳಿಸುವ ಚಿಂತೆಯು, ಇತರರಿಂದ ತಿಳಿಯಲ್ಪಟ್ಟಿದ್ದಾಗಿದ್ದರೂ ಇಲ್ಲವೇ ನಮಗೆ ಮಾತ್ರವೇ ತಿಳಿಯಲ್ಪಟ್ಟಿದ್ದಾಗಿದ್ದರೂ, ದೇವರು ನಮಗಿರಬೇಕೆಂದು ಬಯಸುವ ಆಂತರಿಕ ನೆಮ್ಮದಿಯನ್ನು ಕದ್ದುಕೊಳ್ಳುವುದರಿಂದ ಅದು ನಮ್ಮ ಜೀವಿತಗಳನ್ನು ಕುಂಠಿತಗೊಳಿಸುತ್ತದೆ.

ಆಶ್ಚರ್ಯಕರವಾಗಿ, ಈ "ಮೌನ ನಿರಾಶೆಯ" ಸಮಸ್ಯೆಗೆ ಪರಿಹಾರವು ಮೂಲವಾಗಿ ಬಹಿರಂಗ ಮಾತಾಡುವಿಕೆಯ ಭಯವನ್ನು ಪರಿಹರಿಸುವಂಥದ್ದಾಗಿರುವಂತೆ ಆಗಿದೆ ಎಂದು ಬೈಬಲ್ ಹೇಳುತ್ತದೆ. "ಅಂತರಾಳದಲ್ಲಿ" ಪಾಪದ, ಮರಣದ ಮತ್ತು ದೇವರ ಬಗ್ಗೆ ತಿಳುವಳಿಕೆಯು, ನಿತ್ಯದ ಮೇಲೆ ಸ್ಥಾಪಿಸಲ್ಪಟ್ಟ ಜೀವಿಸುವ ಜೀವನದಿಂದ ಮಾತ್ರವೇ ಬರುವ ನಿರ್ಧರಿಸಿದ ಭರವಸೆಯೊಂದಿಗೆ ಬದಲಾಗಿ ಇಡಲ್ಪಡುವವರೆಗೆ ಕಣ್ಮರೆಯಾಗಿ ಹೋಗುವದಿಲ್ಲ.

ನಾವು ಎಲ್ಲಿ ಇರಬೇಕೆಂದು ದೇವರು ಬಯಸುತ್ತಾನೋ ಅಲ್ಲಿ ನಾವಿರುವುದನ್ನು ಮತ್ತು ನಾವು ಏನನ್ನು ಮಾಡಬೇಕು ಎಂದು ದೇವರು ಬಯಸುತ್ತಾನೋ ಅದನ್ನು ಮಾಡುವುದನ್ನು ನಾವು ತಿಳಿಯಬೇಕು. ಇದು ನಮ್ಮ ಆಂತರ್ಯದ ಜೀವಕ್ಕೆ ಸಮಾಧಾನವನ್ನು ಭರವಸೆಯನ್ನು ತರುವುದು. ಇದು ದೇವರನ್ನು ಬಿಟ್ಟು, ಜಗತ್ತಿನಲ್ಲಿಯ ಯಾವುದರಿಂದಲೂ ಇಲ್ಲವೇ ಯಾವನಿಂದಲೂ ಸೃಷ್ಟಿಸಲ್ಪಡಲಿಕ್ಕಾಗುವುದಿಲ್ಲ.

ಈ ವೈಯಕ್ತಿಕ ಸಮಾಧಾನದ ವಿಚಾರವು ಕೊಲಸ್ಸೆ 2:10ರ ದೊಂದಿಗೆ ಬಂಧಿಸಲ್ಪಟ್ಟಿದೆ. ಅಲ್ಲಿ ಪೌಲನು, "ಆತನಲ್ಲಿದ್ದು ಕೊಂಡೇ (ಕ್ರಿಸ್ತನಲ್ಲಿ) ನೀವು ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ" ಎಂದು ಹೇಳಿದ್ದಾನೆ. ದೇವರು ಕ್ರಿಸ್ತನಲ್ಲಿ ತನ್ನ ಸಮಯಾತೀತ ನಿಧಿಯ ಸಂಪೂರ್ಣತೆಯನ್ನು ಇಟ್ಟಿದ್ದಾನೆ ಎಂದು ಬೇರೆ ಮಾತುಗಳಲ್ಲಿ ಹೇಳಬಹುದು. "ಅದೇನಂದರೆ ಭೂಪರಲೋಕಗಳಲ್ಲಿ ಇರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬದೇ" (ಎಫೆಸ 1:10ಬಿ) ಎಂದು ಪೌಲನು ಹೇಳಿದ್ದರಲ್ಲಿ ಆಶ್ಚರ್ಯವಿಲ್ಲ. ಕ್ರಿಸ್ತನು ನಮ್ಮ ಸರ್ವಸಂಪೂರ್ಣತೆಯಾಗಿದ್ದಾನೆ, ಯಾಕಂದರೆ ಎಲ್ಲಾ ದೈವಿಕ ಆಶೀರ್ವಾದಗಳು ಮತ್ತು ಕೃಪೆಯ ಅವಕಾಶಗಳು ಆತನ ಆತ್ಮಿಕ ದೇಹದಲ್ಲಿ ಇಡಲ್ಪಟ್ಟಿರುತ್ತವೆ.

ಇದು ಸತ್ಯವಾಗಿದೆ ಯಾಕಂದರೆ, "ಆತನಲ್ಲಿ ಸರ್ವಸಂಪೂರ್ಣತೆಯು ವಾಸವಾಗಿರ ಬೇಕೆಂಬುದು ತಂದೆಯ ಚಿತ್ತವಾಗಿತ್ತು" (ಕೊಲೊಸ್ಸೆ 1:19). ಹೀಗೆ ಪೌಲನು, "ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ" (ಕೊಲೊಸ್ಸೆ 2:9) ಎಂದು ಹೇಳಬಲ್ಲವನಾದನು, ಮತ್ತು ಆತನನ್ನು "ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ; ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ" (ಎಫೆಸ 1:22ಬಿ, 23) ಎಂದೂ ಹೇಳಿದನು.

ಇದೆಲ್ಲದರ ಶುಭವಾರ್ತೆಯು, ಕ್ರಿಸ್ತನಲ್ಲಿ ಇರುವವನು ಮತ್ತು ದೇವರ ವಾಕ್ಯದಲ್ಲಿ

ಬೆಳಕಿನಲ್ಲಿ ನಡೆಯುವವನು ವಿಶ್ರಮಿಸಿಕೊಂಡು, ಭಯದಿಂದ ವಿಮುಕ್ತನಾಗಿರಬಹುದು, ಯಾಕಂದರೆ ಅವನು ದೇವ ರಕ್ಷಣೆಯ ಮತ್ತು ಜೀವದ ಸ್ಥಳದಲ್ಲಿರುವವನು ಎಂಬುದಾಗಿದೆ. ಈ ಬಲವಾದ ಸತ್ಯವು ನಮ್ಮ ಯೋಚಿಸುವಿಕೆಯನ್ನು ತುಂಬಿಕೊಳ್ಳಬೇಕು, ಇಂದು ದೇವರ ಮುಂದೆ ನಮ್ಮ ಬಗೆಗಿನ ನಮ್ಮ ದೃಷ್ಟಿಕೋನದ ಮೇಲೆ ಪರಿಣಾಮ ಮಾಡಬೇಕು, ಮತ್ತು ಆತನೊಂದಿಗೆ ನಮ್ಮ ಭವಿಷ್ಯದ ನಡೆಗಾಗಿ ನಮ್ಮನ್ನು ಸಿದ್ಧಪಡಿಸಬೇಕು. ಅದು ನಮ್ಮ ಆಂತರಿಕ ವಿಚಾರಗಳಿಗೆ ಮತ್ತು ಬಹಳವಾಗಿ ಮೆಚ್ಚಿ ಇಟ್ಟುಕೊಂಡಿರುವ ಯೋಜನೆಗಳಿಗೆ ಬಣ್ಣ ಕೊಡತಕ್ಕದ್ದು.

ಸಭೆಯಲ್ಲಿ ನಮಗೆ ದೇವರ ಪರಿಪೂರ್ಣತೆಯಿರುವ ಸುವಾರ್ತೆಯ ವಾಸ್ತವಿಕತೆಯ ಬಗ್ಗೆ ಜಾಗರೂಕತೆಯಿಂದ ಯೋಚಿಸಿರಿ. "ಕ್ರಿಸ್ತನಲ್ಲಿ ಪೂರ್ಣತೆಯಾಗಿರುವುದು ಅಂದರೆ ಏನು ಅರ್ಥ?" ಎಂಬ ಪ್ರಶ್ನೆಯೊಂದಿಗೆ ಪರಿಶುದ್ಧ ಬರಹಗಳನ್ನು ನನ್ನೊಂದಿಗೆ ಶೋಧಿಸಿರಿ.

## ಕ್ಷಮಾಪಣೆಯಲ್ಲಿ ಸಂಪೂರ್ಣತೆ

ಕ್ರಿಸ್ತನಲ್ಲಿ ಸಂಪೂರ್ಣತೆಯಿಂದಿರುವುದು ಅಂದರೆ ನಾವು ದೇವರಿಂದ ನಮ್ಮ ಕ್ಷಮಾಪಣೆಯಲ್ಲಿ ಸಂಪೂರ್ಣವಾಗಿ ಇರುವೆವೆಂದು ಅರ್ಥವಾಗುತ್ತದೆ. ಹೊಸ ಒಡಂಬಡಿಕೆಯು ಕೃಪೆಯ ಒಂದೇ ವ್ಯಾಪ್ತಿಯನ್ನು - ಕ್ರಿಸ್ತನ ಆತ್ಮಿಕ ದೇಹ ವನ್ನು *ಮಾತ್ರ* ತಿಳಿದಿರುತ್ತದೆ. ವಿಮೋಚನೆಯು ತನ್ನ ಕುಮಾರನಲ್ಲಿ *ಮಾತ್ರವೇ* ಒದಗಿಸಲ್ಪಡಲಿಕ್ಕಾಗುವಂತೆ ದೇವರು ರಕ್ಷಣೆಯ ತನ್ನ ಯೋಜನೆಯನ್ನು ರೂಪಿಸಿದನು (ಯೋಹಾನ 14:6). ಆದುದರಿಂದ, ನೀನು ಕ್ರಿಸ್ತನಲ್ಲಿ ಇರುವುದಾದರೆ ನೀನು ವಿಮೋ ಚನೆಯ ಲೋಕದೊಳಗೆ ಇರುವಿ (ರೋಮಾಪುರ 8:1); ನೀನು ಕ್ರಿಸ್ತನ ಹೊರಗೆ ಇದ್ದರೆ, ನೀವು ಶಿಕ್ಷೆಯ ವೃತ್ತದೊಳಗೆ ಇರುವಿರಿ (ಎಫೆಸ 2:12), ಸೈತಾನನ ರಾಜ್ಯದೊಳಗೆ ಇರುವಿರಿ (ಕೊಲೊಸ್ಸ 1:13).

ಒಬ್ಬ ವ್ಯಕ್ತಿಯ ಎರಡು ಆತ್ಮಿಕ ಕ್ಷೇತ್ರಗಳಲ್ಲಿ ಒಂದರಲ್ಲಿ ಮಾತ್ರವೇ ಇರಬಹುದು. ಅವನು ಕ್ರಿಸ್ತನಲ್ಲಿ ಇಲ್ಲವೇ ಕ್ರಿಸ್ತನ ಹೊರಗೆ ರಕ್ಷಣೆಯ ಸ್ಥಳದಲ್ಲಿ ಇಲ್ಲವೇ ದೇವರಿಂದ ಬೇರ್ಪಡಿಸಲ್ಪಟ್ಟ ಸ್ಥಳದಲ್ಲಿ ಇರುವನು. ಎರಡರಲ್ಲಿ - *ಇಲ್ಲವೇ ಜಗತ್ತಿನಲ್ಲಿ ಎರಡರಲ್ಲಿಯೂ ನಾವು ಇರಲಾರೆವು!*

ಕ್ರಿಸ್ತನಲ್ಲಿರುವ ವ್ಯಕ್ತಿಯು ಕ್ರಿಸ್ತನ ರಕ್ಷಣೆ ಹೊಂದಿಕೊಳ್ಳಲು ಬೆಳಕಿನಲ್ಲಿ ನಡೆಯ ತಕ್ಕದ್ದು (1 ಯೋಹಾನ 1:7); ಇಲ್ಲದಿದ್ದರೆ ರಕ್ಷಣೆ ಹೊಂದಿಕೊಳ್ಳುವ ಸ್ಥಳದಲ್ಲಿ (ಕ್ರಿಸ್ತನಲ್ಲಿ) ಇದ್ದುಕೊಂಡು, ಸೀಮೋನನು ಅದನ್ನು ಕಳೆದುಕೊಂಡಂತೆ, ಅದನ್ನು ಹೊಂದಿ ಕೊಳ್ಳ ಲಿಕ್ಕಿಲ್ಲ (ಅಪೊಸ್ತಲರ ಕೃತ್ಯಗಳು 8:20, 21). ನಂಬಿಕೆಯಿಂದ ನಡೆಯುವುದು ಎರಡು ಅವಶ್ಯವಾದ ಗುಣಲಕ್ಷಣಗಳನ್ನು ಒಳಗೊಂಡಿರುತ್ತದೆ: ಮೊದಲನೆದು, ಅದು ನಮ್ಮನ್ನು ರಕ್ಷಿಸಲಿಕ್ಕೆ ಯೇಸುವನ್ನು ನಂಬುವುದು ಎಂದರ್ಥವಾಗುತ್ತದೆ (ಎಫೆಸ 2:8, 9) ಮತ್ತು ಎರಡನೆಯದು, ಕ್ರಿಸ್ತನ ಚಿತ್ತವಷ್ಟೇ ವಿಧೇಯರಾಗಲು ಪ್ರಾಮಾಣಿಕತೆಯಿಂದ ಹುಡುಕುವುದನ್ನು ಒಳಗೊಂಡರುತ್ತದೆ (ಇಬ್ರಿಯ 5:8, 9).

ವಿಮೋಚಿತನಾದ ವ್ಯಕ್ತಿಯು ಅಂಧಕಾರದ ದೊರೆತನದಿಂದ ಬಿಡುಗಡೆ ಮಾಡಲ್ಪಟ್ಟಿದ್ದಾನೆ ಮತ್ತು "ಆತನ ಪ್ರಿಯ ಕುಮಾರನ ರಾಜ್ಯದೊಳಗೆ ವರ್ಗಾಯಿಸಲ್ಪಟ್ಟಿದ್ದಾನೆ, ಆತನಲ್ಲಿ ನಮಗೆ ವಿಮೋಚನೆ, ಪಾಪಗಳ ಕ್ಷಮಾಪಣೆ ಇರುತ್ತದೆ" (ಕೊಲೊಸ್ಸ 1:13ಬಿ, 14). ಕ್ರೈಸ್ತರಾದ ಅನ್ಯ ಜನರ ಬಗ್ಗೆ ಪೌಲನು ಹೀಗೆ ಹೇಳಿದನು: "ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿ

ದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ತರಾದಿರಿ" (ಎಫೆಸ 2:13). ಪೇತ್ರನ ಪ್ರಕಾರವಾಗಿ ಕ್ರೈಸ್ತ ಕೃಪೆಗಳಲ್ಲಿ ಬೆಳೆಯುವ ಕ್ರಿಸ್ತನಲ್ಲಿರುವ ಎಲ್ಲರಿಗೂ ಪರಲೋಕದ ನಿತ್ಯರಾಜ್ಯದೊಳಗೆ ವಿಫುಲವಾದ ಪ್ರವೇಶವು ಕೊಡಲ್ಪಡುವುದು:

> ಆದದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವದಕ್ಕೆ ಮತ್ತಷ್ಟು ಪ್ರಯಾಸಪಡಿರಿ. ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವದಿಲ್ಲ, ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ನಿತ್ಯ ರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು (2 ಪೇತ್ರ 1:10, 11).

ಯೇಸುವು ಈ ಸತ್ಯವನ್ನು ಮರೆಯಲಾಗದ ರೀತಿಯಲ್ಲಿ ತನ್ನ ಸಾಮ್ಯಗಳಲ್ಲಿ ಒಂದರಿಂದ ಉದಾಹರಿಸಿದನು (ಮತ್ತಾಯ 20:1-16). ದ್ರಾಕ್ಷೇತೋಟದ ಯಜಮಾನನು ಪ್ರಾತಃಕಾಲದಲ್ಲಿ ಕೆಲಸದವರನ್ನು ಕೂಲಿಗಾಗಿ ಹಿಡಿದನು, ಆಮೇಲೆ ಒಂಭತ್ತು ಘಂಟೆಗೆ, ಹನ್ನೆರಡು ಘಂಟೆಗೆ, ಮೂರು ಘಂಟೆಗೆ ಮತ್ತು ಐದು ಘಂಟೆಗೆ ಕೂಲಿ ಯಾಳುಗಳನ್ನು ಕೆಲಸಕ್ಕೆ ತಂದನು. ಕೆಲಸದ ದಿನದ ಅಂತ್ಯದಲ್ಲಿ ಪ್ರತಿಯೊಬ್ಬ ಕೆಲಸದವನಿಗೂ ಒಂದೇ ರೀತಿಯ ಕೂಲಿಯನ್ನು ಕೊಟ್ಟನು. ಅದು ನ್ಯಾಯವಾಗಿ ಕಾಣುವುದಿಲ್ಲ ಅಲ್ಲವೇ? ಸಾಮಾನ್ಯವಾಗಿ ತನ್ನ ಕೂಲಿಯವರು ಒಂದೇ ಸಂಖ್ಯೆಯ ತಾಸುಗಳ ವರೆಗೆ ಕೆಲಸ ಮಾಡದಿದ್ದರೆ ಯಾವ ತೋಟಗಾರನೂ ತನ್ನ ಕೆಲಸದವರಿಗೆ ಸಮನಾದ ಕೂಲಿ ಕೊಡುವುದಿಲ್ಲ. ನಾವು ಇಂದು ಫಾರ್ಮಿನಲ್ಲಿ ಏನು ಮಾಡುತ್ತೇವೆ ಇಲ್ಲವೇ ಮೊದಲನೆಯ ಶತಮಾನದ ಜಗತ್ತಿನಲ್ಲಿ ಒಂದು ಫಾರ್ಮಿನಲ್ಲಿ ಏನು ಮಾಡಲ್ಪಡುತ್ತಿತ್ತು ಎಂಬುದನ್ನು ಯೇಸುವಿನ ಕಥೆಯು ಉದಾಹರಿಸುತ್ತಿದ್ದಿಲ್ಲ, ಆದರೆ ಕೃಪೆಯ ರಾಜ್ಯದಲ್ಲಿ ದೇವರು ಏನನ್ನು ಮಾಡುತ್ತಾನೆ ಎಂಬುದಕ್ಕೆ ದೃಷ್ಟಾಂತವಾಗಿತ್ತು.

"ಶಿಲುಬೆಯ ಅಡಿಯಲ್ಲಿ ನೆಲವು ಸಮನಾಗಿ ಇರುತ್ತದೆ." ಕ್ರಿಸ್ತನಲ್ಲಿ ಇರುವ ಯಾವನೂ ಬೇರೆಯವನಿಗಿಂತ ಹೆಚ್ಚಾಗಿ ರಕ್ಷಿಸಲ್ಪಡುವುದಿಲ್ಲ. ನೀನು ಕ್ರಿಸ್ತನಲ್ಲಿ ಇದ್ದರೆ ಮತ್ತು ನಿನ್ನನ್ನು ರಕ್ಷಿಸಲು ನೀನು ಯೇಸುವನ್ನು ನಂಬಿದರೆ ಮತ್ತು ನೀನು ಯಥಾರ್ಥವಾಗಿ ಆತನ ಚಿತ್ತಕ್ಕೆ ವಿಧೇಯನಾಗಲು ಹುಡುಕುತ್ತಿದ್ದರೆ, ಕ್ರಿಸ್ತನಲ್ಲಿ ಇತರರಂತೆಯೇ ನೀನು ರಕ್ಷಿಸಲ್ಪಟ್ಟಿರುವಿ.

ಪ್ರತಿಯೊಬ್ಬನು ಒಂದೇ ರೀತಿಯಲ್ಲಿ - ಅರ್ಹತೆಯಿಲ್ಲದ ಮೆಚ್ಚಿಕೆ ಸುವಾರ್ತೆಯ ಮುಖಾಂತರ ದೇವರ ಬಳಿಗೆ ಬರತಕ್ಕದ್ದು. ಲೆಕ್ಕಾಕೊಡಬೇಕಾದ ಎಲ್ಲಾ ಜನರು ಪಾಪಿಗಳಾಗಿದ್ದಾರೆ ಮತ್ತು ಕ್ರಿಸ್ತನ ರಕ್ತದಿಂದ ರಕ್ಷಿಸಲ್ಪಡತಕ್ಕದ್ದು. ತನಗೆ ಕೇವಲ ಸ್ವಲ್ಪ ರಕ್ಷಣೆಯ ಅಗತ್ಯತೆಯಿದೆ ಆದರೆ ಬೇರೆಯವರಿಗೆ ಬಹಳ ರಕ್ಷಣೆ ಬೇಕೆಂದು ಹೊಗಳಿಕೊಳ್ಳಬೇಕಾಗಿರುವುದಿಲ್ಲ: ಇಲ್ಲವೇ ಅವನು ತಾನು ಭಾಗಶಃವಾಗಿ ತಪ್ಪಿಹೋಗಿದ್ದೇನೆ, ಇತರರು ಸಂಪೂರ್ಣವಾಗಿ ತಪ್ಪಿಹೋಗಿದ್ದಾರೆ ಎಂದು ಹೇಳಿಕೊಳ್ಳಲೂ ಬೇಕಾಗಿರುವುದಿಲ್ಲ. ಇದು ಪ್ರತಿಯೊಬ್ಬರಿಗೂ ಒಂದೇಯಾಗಿರುತ್ತದೆ - ಕ್ರಿಸ್ತನ ಹೊರಗೆ ಇರುವವರೆಲ್ಲರೂ ಸಂಪೂರ್ಣವಾಗಿ ತಪ್ಪಿ ಹೋಗಿದ್ದಾರೆ, ಮತ್ತು ಕ್ರಿಸ್ತನಲ್ಲಿ ಇರುವ ಎಲ್ಲರೂ ಪೂರ್ಣವಾಗಿ ರಕ್ಷಿಸಲ್ಪಟ್ಟಿದ್ದಾರೆ. ಯಾರೊಬ್ಬನೂ ಹೆಚ್ಚಾಗಿ ಕ್ರಿಸ್ತನಲ್ಲಿ ಇಲ್ಲವೇ ಹೆಚ್ಚಾಗಿ ಆತನ ಹೊರಗೆ ಇರುವುದಿಲ್ಲ.

ಸಮಾನತೆಯ ಕನ್ನಡಕದ ಮುಖಾಂತರ ರಕ್ಷಣೆಯ ಬಗ್ಗೆ ಈ ಸತ್ಯದ ಕಡೆಗೆ ನೋಡಿರಿ. ನೋಹನ ನಾವೆಯೊಳಗೆ ಪ್ರವೇಶಿಸಲು ಎಂಟು ಜನರಿಗೆ ಮಾತ್ರ ಅಪ್ಪಣೆ ದೊರೆಯಿತು. ಒಮ್ಮೆ ನಾವೆಯೊಳಗಿದ್ದಾಗ, ಆ ಎಂಟೂ ಜನರು ಸುರಕ್ಷಿತತೆಯ

ಸ್ಥಾನದಲ್ಲಿದ್ದರು. ಯಾರೂ ಇತರ ಏಳು ಜನರಿಗಿಂತ ಹೆಚ್ಚು ಸುರಕ್ಷಿತರಾಗಿರಲಿಲ್ಲ. ನೋಹನ ಇತರರಿಗಿಂತ ಹೆಚ್ಚು ಆತ್ಮಿಕವಾಗಿ ಬೆಳವಣಿಗೆಯುಳ್ಳವರಾಗಿದ್ದಿರಬಹುದು, ಆದರೆ ನಾವೆ ಯಲ್ಲಿ ಎಲ್ಲರೂ ತೊಂದರೆಯಿಲ್ಲದವರಾಗಿದ್ದರು. ನಾವೆಯ ಹೊರಗಿದ್ದ ಭೂಲೋಕದ ಜನ ಸಮೂಹಗಳು ನೀರಿನ ಸಮಾಧಿಯಲ್ಲಿ ನಾಶವಾಗಿ ಹೋದರು.

---

*ಕ್ರಿಸ್ತನಲ್ಲಿ ನಮ್ಮ ನಿಲುವಿಕೆಗಿಂತ*
*ಹೆಚ್ಚಿನ ಉತ್ತಮ ಸ್ಥಾನದಲ್ಲಿ*
*ನಾವಿರಲಾರೆವು; ಕ್ರಿಸ್ತನಲ್ಲಿ ನಾವು*
*ಸ್ವೀಕರಿಸಿಕೊಳ್ಳುವುದಕ್ಕಿಂತ ತಂದೆಯಿಂದ*
*ನಾವು ಹೆಚ್ಚು ಒದಗಿಸಿಕೊಡವಿಕೆಗಳನ್ನು*
*ಸ್ವೀಕರಿಸಲಾರೆವು; ಕ್ರಿಸ್ತನಲ್ಲಿ*
*ನಮಗಿರುವ ಆತ್ಮಿಕ ಬೆಳವಣಿಗಾಗಿ*
*ಇರುವ ಅವಕಾಶಕ್ಕಿಂತ ಹೆಚ್ಚು ದೊಡ್ಡ*
*ಅವಕಾಶವು ನಮಗೆ ಇರಲಾರದು.*

---

ತನ್ನ ಜೀವನದಲ್ಲಿ ಮೊದಲು ಬ್ಯಾಂಕ್ ಧರೋಡೆಮಾಡಿದ ಒಬ್ಬ ಮನುಷ್ಯನೊಂದಿಗೆ ಕೆಲವು ವರ್ಷಗಳ ಹಿಂದೆ ನಾನು ಅಭ್ಯಾಸಮಾಡಿದೆನು. ಅವನು ತನ್ನ ಅಪರಾಧಕ್ಕಾಗಿ ಶಿಕ್ಷೆ ಹೊಂದಿದನು ಮತ್ತು ತನ್ನ ಸಮಯವನ್ನು ಸೆರೆಮನೆಯಲ್ಲಿ ಕಳೆದಿದ್ದನು. ತನ್ನ ಜೀವನದ ಅಂತ್ಯದಲ್ಲಿ, ಕ್ಯಾನ್ಸರಿನಿಂದ ಬಳಲುತ್ತಿದ್ದಾಗ, ಜೀವಿಸಲು ಕೆಲವೇ ದಿನಗಳು ಉಳಿದಿದ್ದಾಗ, ನಾನು ಅವನನ್ನು ಸಂದರ್ಶಿಸಬೇಕೆಂದು, ಒಬ್ಬನು ಹೇಗೆ ಕ್ರೈಸ್ತನಾಗ ಬೇಕೆಂಬುದನ್ನು ತನಗೆ ಹೇಳಬೇಕೆಂದು ಕೇಳಿಕೊಂಡನು. ನಾನು ಆಸ್ಪತ್ರೆಯಲ್ಲಿ ಅವನ ಹಾಸಿಗೆಯ ಬಳಿಯಲ್ಲಿ ಕುಳಿತುಕೊಂಡೆನು ಮತ್ತು ರಕ್ಷಣೆಯ ಮಾರ್ಗವನ್ನು ವಿವರಿಸಿದ ಪರಿಶುದ್ಧ ಬರಹಗಳನ್ನು ಅವನಿಗೆ ಓದಿಹೇಳಿದೆನು. ಎರಡು ತಾಸುಗಳ ವರೆಗೆ ಅವನಕೂಡ ಅಧ್ಯಯನ ಮಾಡಿದ ನಂತರ, ಅವನು ತಾನು ಕ್ರೈಸ್ತನಾಗುವಂತೆ ಬಾಪ್ತಿಸ್ಮ ಮಾಡಿಸಿಕೊಳ್ಳುವ ತನ್ನ ಅಪೇಕ್ಷೆಯನ್ನು ಕಣ್ಣೀರಿನಿಂದ ತಿಳಿಸಿದನು, "ನೀನು ಸ್ವಸ್ಥನಾದರೆ, ಆತನ ಸೇವೆ ಮಾಡಲು ಯೋಚಿಸುವಿಯೋ?" ಎಂದು ಕೇಳಿದೆನು. ಎಷ್ಟು ದೀರ್ಘಕಾಲವಾದರೂ, ತಾನು ಯಾವುದೇ ಪರಿಸ್ಥಿತಿಯಲ್ಲಿ ಜೀವಿಸ ಬೇಕಾ ಗಿದ್ದರೂ, ತನ್ನ ಉಳಿದ ಜೀವನದಲ್ಲಿ ಕ್ರಿಸ್ತನಿಗಾಗಿ ಜೀವಿಸಲು ಬಯಸುವೆನೆಂದು ಅವನು ಹೇಳಿದನು. ಅನಂತರದಲ್ಲಿ ಆ ದಿನ ಅವನು ಬಾಪ್ತಿಸ್ಮದ ಸ್ಥಳಕ್ಕೆ ಸ್ಟ್ರೆಚ್ಚರಿನಲ್ಲಿ ಕೆಲವು ಕ್ರೈಸ್ತರಿಂದ ಒಯ್ಯಲ್ಪಟ್ಟು ಬಾಪ್ತಿಸ್ಮ ಮಾಡಿಸಲ್ಪಟ್ಟನು, ತನ್ನ ಬಾಪ್ತಿಸ್ಮದ ನಂತರ ಒಂದು ವಾರವಾದ ಮೇಲೆ ಜೀವನದ ಇನ್ನೊಂದು ಭಾಗಕ್ಕೆ ದಾಟಿ ಹೋದನು.

ತನ್ನ ಜೀವನದ 99 ಶತ ಭಾಗವನ್ನು ಅವನು ಕತ್ತಲೆಯ ರಾಜ್ಯದಲ್ಲಿ ಜೀವಿ ಸಿದರೂ, ಬಾಪ್ತಿಸ್ಮದಲ್ಲಿ - ಅವನ ಉತ್ತರವು ಯಥಾರ್ಥವಾದದ್ದೂ ಅವನ ನಂಬಿಕೆಯು ಪ್ರಾಮಾಣಿಕವಾದದ್ದೂ ಎಂದು ತಿಳಿದುಕೊಂಡು - ಅವನು ಕೃಪೆಯ ರಾಜ್ಯವನ್ನು ಪ್ರವೇಶಿಸಿದನು. ಅವಕಾಶದ ತನ್ನ ಜೀವನದಲ್ಲಿ ಮಧ್ಯರಾತ್ರಿಗಿಂತ ಕೆಲವೇ ನಿಮಿಷಗಳ ಮೊದಲು ಅವನು ಪ್ರವೇಶಿಸಿದರೂ, ಅವನು ಜೀವನದ ದಿನದಲ್ಲಿ ಮೊದಲು ಪ್ರವೇ ಶಿಸಿದವರಂತೆ ನಿತ್ಯ ಜೀವದ ಅದೇ ವರವನ್ನು ಹೊಂದಿಕೊಳ್ಳುವನು. ಒಂದು ವಾರದ ವೆರೆಗೆ, ಅವನ ಕೊನೆಯವಾರ, ಅವನು ವಿಮೋಚನೆಯ ಸ್ಥಾನದಲ್ಲಿ, ಕ್ರಿಸ್ತನಲ್ಲಿ ಸಂಪೂರ್ಣವಾಗಿ ನಿಂತುಕೊಂಡನು. ಜೀವನದ ಆಟದ ಕೊನೆಯ ಆಟದಲ್ಲಿ ಅವನು

ಒಂದುಗೂಡಿದನು ಮತ್ತು ಆಟದಲ್ಲಿ ಜಯಶಾಲಿಯಾದನು.

ಕ್ರಿಸ್ತನ ಆತ್ಮಿಕ ದೇಹದಲ್ಲಿ ಹೇಗೆ ಪ್ರವೇಶಿಸ ಬೇಕೆಂಬುದರ ಮೇಲೆ ಒಂದು ಸ್ಪಷ್ಟವಾದ ಪರಿಚ್ಛೇದವು ಗಲಾತ್ಯ 3:27: “ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ಬಾಪ್ತಿಸ್ಮಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ.” ಕೇವಲ ಯೋಚಿಸಿರಿ: ಯಾವನಾದರೂ ನಂಬಿಕೆಯಲ್ಲಿ ದೇವರ ಮತ್ತು ಕ್ರಿಸ್ತನ ಬಳಿಗೆ, ಎಲ್ಲಾ ಪಾಪಕ್ಕೆ ಪಶ್ಚಾತ್ತಾಪ ಪಟ್ಟು, ಯೇಸುವಿನಲ್ಲಿ ತನ್ನ ನಂಬಿಕೆಯನ್ನು ಅರಿಕೆ ಮಾಡಿ ಬರುವವನು, ಮತ್ತು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುವವನು ದೇವರಿಂದ ಕೂಡಲೇ ಕ್ಷಮಾಪಣೆಯಲ್ಲಿ ಸಂಪೂರ್ಣನಾಗುವನು. ಎಲ್ಲಾ ನಾಗರಿಕರು ಪಾಪಗಳ ಪರಿಹಾರವನ್ನು ಮತ್ತು ನಿತ್ಯ ಜೀವವನ್ನು ಹೊಂದಿದ ವಿಮೋಚಿತರ ಸ್ಥಳವನ್ನು ಪ್ರವೇಶಿಸುವನು.

## ಒದಗಿಸಿಕೊಡುವಿಕೆಗಳಲ್ಲಿ ಪರಿಪೂರ್ಣತೆ

ಕ್ರಿಸ್ತನಲ್ಲಿ ಸಂಪೂರ್ಣವಾಗಿರುವುದು ಅಂದರೆ, ಒಂದು ಅರ್ಥದಲ್ಲಿ ಆತ್ಮಿಕ ಒದಗಿಸುವಿಕೆಗಳಲ್ಲಿ ನಾವು ಸಂಪೂರ್ಣತೆಯುಳ್ಳವರಾಗಿದ್ದೇವೆಂದು ಅರ್ಥವಾಗುತ್ತದೆ. ನಿತ್ಯ ಮಹಿಮೆಯ ವಾಗ್ದತ್ತ ದೇಶಕ್ಕೆ ನಮ್ಮ ಪ್ರಯಾಣಕ್ಕಾಗಿ ಅಗತ್ಯವಾಗಿರುವ ಯಾವುದೇ ಆತ್ಮಿಕ ಸೌಕರ್ಯಗಳು ಇಲ್ಲವೇ ಮೂಲವಸ್ತುಗಳು ನಮಗೆ ಲಭ್ಯವಾಗಿರುತ್ತದೆ.

ಕೊಲೊಸ್ಸೆಯಲ್ಲಿರುವ ಸಭೆಯು ರಕ್ಷಣೆಯ ದೇವರ ಯೋಜನೆಯಲ್ಲಿ ಕ್ರಿಸ್ತನ ಸ್ಥಳವನ್ನು ಮಿತಿಗೊಳಿಸಿದ ಒಂದು ರೀತಿಯ ಸುಳ್ಳು ಬೋಧನೆಯಿಂದ (ಬಹುಶಃ ಪ್ರಾರಂಭದ ಗ್ನೊಸ್ತಿಸಿಜಮ್) ಪೀಡಿಗೆ ಒಳಗಾಗಿತ್ತು. ಸುಳ್ಳು ಬೋಧನೆಯನ್ನು ಸೋಲಿಸಿ, ನಾಶಪಡಿಸಲು, ಪೌಲನು ಕ್ರಿಸ್ತನ ಶ್ರೇಷ್ಠತೆಯನ್ನು ಕೊಲೊಸ್ಸೆಯವರಿಗೆ ಸ್ಪಷ್ಟವಾಗಿ ವಿವರಿಸಿದನು. ಕ್ರಿಸ್ತನಲ್ಲಿ ದೈವತ್ವದ ಪೂರ್ಣತೆಯು ದೈಹಿಕವಾಗಿ ವಾಸಿ ಸುತ್ತದೆ ಎಂದು ಅವನು ಹೇಳಿದನು (ಕೊಲೊಸ್ಸೆ 2:9). ಅಂದರೆ, ತಂದೆಯಾದ ದೇವರು, ಕುಮಾರನಾದ ಯೇಸುವು ಹಾಗೂ ಪರಿಶುದ್ಧಾತ್ಮನು ಪೂರ್ಣವಾಗಿ ನಮಗೆ ಕೊಡಲು ಹುಡುಕುವುದು ಪೂರ್ಣವಾಗಿ, ಉಚಿತವಾಗಿ ಹಾಗೂ ಅಂತಿಮವಾಗಿ ಕ್ರಿಸ್ತನಲ್ಲಿ ಒದಗಿಸಲ್ಪಟ್ಟಿದೆ. ದೇವರು ನಮಗೆ ಕೊಡಲು ಹಂಬಲಿಸುವ ಎಲ್ಲಾ ಆತ್ಮಿಕ ಐಶ್ವರ್ಯಗಳ ಮೂಲವೂ, ಸಾಕಾರನೂ, ಪೂರ್ಣ ಸಾಧಕನೂ ಮತ್ತು ಒಟ್ಟು ಸಾರಾಂಶವೂ ಆಗಿದ್ದಾನೆ. ನಾವು ಆತನಲ್ಲಿ ಸಂಪೂರ್ಣರಾಗಿದ್ದೇವೆ ಎಂದು ಅರ್ಥವಾಗುತ್ತದೆ (ಕೊಲೊಸ್ಸೆ 2:10), ಅಂದರೆ ಯಾವುದರ ಕೊರತೆಯಲ್ಲಿಯೂ ಇರುವುದಿಲ್ಲ.

ಹೀಗೆ ಹೇಳುವುದರಿಂದ ಪೌಲನು ಎಫೆಸದವರಿಗೆ ಬರೆದ ಪತ್ರಿಕೆಯ ಪ್ರಾರಂಭದಲ್ಲಿ ತನ್ನ ಸ್ತೋತ್ರ ಗೀತೆಯಲ್ಲಿ ಕ್ರಿಸ್ತನ ಈ ಪರಿಪೂರ್ಣತೆಗಾಗಿ ದೇವರನ್ನು ಕೊಂಡಾಡಿದ್ದಾನೆ: “ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯ ವರಗಳನ್ನು ನಮಗೆ *ಕ್ರಿಸ್ತ ಯೇಸುವಿನಲ್ಲಿ* ಅನುಗ್ರಹಿಸಿದ್ದಾನೆ” (ಎಫೆಸ 1:3; ಒತ್ತಿ ಹೇಳಿದ್ದು ನನ್ನದು). ಪೇತ್ರನು ಇಂಥದೇ ಆದ ಘೋಷಣೆಯನ್ನು ತನ್ನ ಎರಡನೆಯ ಪತ್ರಿಕೆಯ ಪ್ರಾರಂಭದಲ್ಲಿ ಮಾಡಿದ್ದಾನೆ: “ದೇವರ ವಿಷಯವಾಗಿಯೂ ಕರ್ತನಾದ ಯೇಸುವಿನ ವಿಷಯವಾಗಿಯೂ ಪರಿಜ್ಞಾನವು ನಿಮಗೆ ಉಂಟಾಗುವದರಲ್ಲಿ ಕೃಪೆಯೂ ಶಾಂತಿಯೂ ನಿಮಗೆ ಹೆಚ್ಚೆಚ್ಚಾಗಿ ದೊರೆಯಲಿ. ನಮ್ಮನ್ನು ತನ್ನ ಪ್ರಭಾವದಿಂದಲೂ ಗುಣಾತಿಶಯದಿಂದಲೂ ಕರೆದ ದೇವರ ವಿಷಯವಾಗಿ ಯೇಸುವಿನ ದಿವ್ಯ ಶಕ್ತಿಯು ನಮಗೆ ಪರಿಜ್ಞಾನವನ್ನು ಕೊಟ್ಟದ್ದರಲ್ಲಿ ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವೂ ದೊರೆಯಿತೆಂದು ಬಲ್ಲೆವಷ್ಟೇ” (2 ಪೇತ್ರ 1:2, 3). ಆತ್ಮಿಕ ಆಶೀರ್ವಾದಗಳು ಎಲ್ಲಿ ಇರುವವು ಎಂದು ಹೇಳಿದನು, ನಾವು ಅವುಗಳನ್ನು ಹೇಗೆ

ಸ್ವೀಕರಿಸಿಕೊಳ್ಳಬೇಕು ಎಂಬುದನ್ನು ಪೇತ್ರನು ಹೇಳಿದನು. ಆಶೀರ್ವಾದಗಳು ಕ್ರಿಸ್ತನಲ್ಲಿ ಇರುವವು ಎಂದು ಪೌಲನು ಹೇಳಿದನು ಮತ್ತು *ಯೇಸುಕ್ರಿಸ್ತನ ಜ್ಞಾನದ ಮುಖಾಂತರ ಅವು ಇರುವವು* ಎಂದು ಪೇತ್ರನು ಹೇಳಿದನು. ಹೀಗೆ ಇಬ್ಬರೂ ಬರಹಗಾರರು, ನಮಗೆ ದೇವರ ವರಗಳ ಸರ್ವಸಂಪೂರ್ಣತೆಯನ್ನು ಒತ್ತಿ ಹೇಳಿದರು.

ಜಲಾಂತರ್ಗಾಮಿ ಹಡಗುಗಳ ಬಗ್ಗೆ, "ನೀರಿನ ಕೆಳಗೆ ಚಲಿಸುವ ಹಡಗುಗಳ" ಬಗ್ಗೆ ಯೋಚಿಸಿರಿ. ಅವು ನಾವಿಕರ ತಂಡಗಳನ್ನು ಸಮುದ್ರದ ಆಳಗಳೊಳಗೆ ಸುರಕ್ಷಿತವಾಗಿ ಹಿತಕರವಾಗಿ ತೆಗೆದುಕೊಂಡು ಹೋಗಲು ಶಕ್ತಿಯುಳ್ಳವುಗಳಾಗಿವೆ. ಸಮುದ್ರದ ಅಡಿಯಲ್ಲಿ "ಜೀವಿಸುವ ಸಮಾಜಗಳಂತೆ" ಅವು ಊಟದ ಕೋಣೆ, ಹಾಸಿಗೆ, ಮನರಂಜನಾ ಸಲಕರಣೆ, ಎಲ್ಲಾ ರೀತಿಯ ಸಂಪರ್ಕ ಪದ್ಧತಿಗಳು ಮತ್ತು ಬರಬಹುದಾದ ಯಾವುದೇ ಅಗತ್ಯತೆಗಾಗಿ ಆಧುನಿಕ ಯಂತ್ರಜ್ಞಾನ ಎಲ್ಲವುಗಳಿಂದ ಪೂರ್ಣವಾಗಿರುತ್ತದೆ.

ಸಮುದ್ರದ ನೆಲದ ಮೇಲೆ ವಿಶಾಲ ಕೊಳಗಳಲ್ಲಿ ಮತ್ತು ಬಲವಾದ ಪರ್ವತಗ ಳಲ್ಲಿ ಗಂಡಾಂತರಗಳು ಕಾದು ಕೊಂಡಿರುತ್ತವೆ, ಆದಾಗ್ಯೂ ಜಲಾಂತರ್ಗಾಮಿ ಹಡಗು ಈ ಗಂಡಾಂತರಗಳ ಮೂಲಕ ತೊಂದರೆಗೊಳಗಾಗಿದೆ - ಅದರ ಪ್ರಯಾಣಿಕರಿಗೆ ಭದ್ರತೆಯನ್ನು ಒದಗಿಸುತ್ತ, ಪ್ರಯಾಣಮಾಡುವಾಗ ಅವರಿಗೆ ರೂಢಿಯ ಜೀವನ ಒದಿಗಿಸುತ್ತ ಚಲಿಸುತ್ತದೆ. ಆಶ್ಚರ್ಯಕರವಾದ ತಾರತಮ್ಯ: ಆಶ್ರಯ, ಜೀವ, ಮತ್ತು ಆನಂದ ಇವುಗಳು ಮರಣ, ಭಯಾನಕತೆ ಮತ್ತು ಕತ್ತಲೆಯ ಮಧ್ಯದಲ್ಲಿ.

ಅತಿ ಎತ್ತರವಾದ ಮಟ್ಟದಲ್ಲಿ, ಕ್ರಿಸ್ತನಲ್ಲಿ ನಮ್ಮ ಜೀವಿತವು ಅದೇ ರೀತಿಯಾದ ಚಿತ್ರದೊಂದಿಗೆ ವಿವರಿಸಲ್ಪಡಬಹುದು. ಆತನಲ್ಲಿ ನಾವು ನಿತ್ಯ ಮರಣದಿಂದ ಸ್ವತಂತ್ರರಾಗಿರುವೆವಲ್ಲದೇ, ಪಾಪದ ನಿತ್ಯವಾದ ಪರಿಣಾಮಗಳಿಂದಲೂ ನಾವು ಕಾಪಾಡಲ್ಪಟ್ಟಿದ್ದೇವೆ (ರೋಮಾಪುರ 8:1), ಜೀವನದ ಒಂದು ನೂತನ ಗುಣಕ್ಕಾಗಿ ಒದಗಿಸುವಿಕೆಗಳ ಸ್ವಾಸ್ಥ್ಯದಲ್ಲಿದ್ದೇವೆ. ಪರಲೋಕದ ಆತ್ಮಿಕ ಸಮೃದ್ಧಿಯೊಂದಿಗೆ ಅನುದಿನವೂ ಸುತ್ತುವರಿಯಲ್ಪಟ್ಟಿದ್ದು (ಯೋಹಾನ 10:10), ಬರಲಿಕ್ಕಿದ್ದ ಮಹಿಮೆಯ ಪೂರ್ಣ ಪ್ರಕಾಶವನ್ನು ರುಚಿನೋಡುತ್ತೇವೆ.

ಜಲಾಂತರ್ಗಾಮಿ ಹಡಗಿನ ಹೊರಗೆ ಇರುವವನು ಸಮುದ್ರದ ಅಪಘಡಗಳಿಂದ ಬೇಗನೆ ನಾಶಪಡಿಸಲ್ಪಡುವಂತೆ, ಕ್ರಿಸ್ತನ ಹೊರಗೆ ಇರುವವನಿಗೆ ನಿರೀಕ್ಷೆಯಿರುವುದಿಲ್ಲ (ಎಫೆಸ 2:12). ರಕ್ಷಣೆಯ ಜಲಾಂತರ್ಗಾಮಿ ಹಡಗು ಕ್ರಿಸ್ತನ ದೇಹವಾಗಿದೆ, ಆತನಲ್ಲಿ ನಾವು ಸುರಕ್ಷಿತರಾಗಿದ್ದೇವೆ; ಆತನ ಹೊರಗೆ ನಾವು ಪಾಪದ ಸಾಗರದಿಂದ ಜಜ್ಜಲ್ಪಟ್ಟಿರುತ್ತೇವೆ. ಕ್ರಿಸ್ತನು ನಮ್ಮ ಸಂರಕ್ಷಣೆಯು ಮತ್ತು ಒದಗಿಸಿಕೊಡುವಿಕೆಯು, ನಮ್ಮ ಭದ್ರತೆಯು ಮತ್ತು ಪೋಷಣ ಶಕ್ತಿಯೂ ಆಗಿದ್ದಾನೆ.

ನೀನು ಕ್ರಿಸ್ತನ ಹೊರಗೆ ಇದ್ದರೆ, ನಿಶ್ಚಯವಾಗಿಯೂ "ಒಬ್ಬನು ಹೇಗೆ ಕ್ರಿಸ್ತನನ್ನು ಪ್ರವೇಶಿಸುವನು?" ಎಂದು ನೀನು ಕೇಳುತ್ತೀ. ಆತನ ದೇಹದೊಳಗೆ ನಾವು ಹೇಗೆ ಸ್ಥಳಾಂತರಿ ಸಲ್ಪಡುತ್ತೇವೆ ಎಂಬುದರ ಬಗ್ಗೆ ಪೌಲನ ವಿವರಣೆಯನ್ನು ಜಾಗರೂಕತೆಯಿಂದ ಕೇಳಿರಿ: "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡಿರುವ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?" (ರೋಮಾಪುರ 6:3). ಆತನ ಮರಣದೊಳಗೆ ಬಾಪ್ತಿಸ್ಮದಲ್ಲಿ ನಮ್ಮ ನಂಬಿಕೆಯು ಪೂರ್ತಿಗೊಳ್ಳುವಾಗ ಮತ್ತು ವಿಧೇಯ ನಂಬಿಕೆಯಿಂದ ಅನುದಿನವೂ ಆತನಲ್ಲಿ ನೆಲೆಗೊಳ್ಳುವಾಗ ನಾವು ಕ್ರಿಸ್ತನ ದೇಹದ ಭಾಗವಾಗಿ ಮಾಲ್ಪಡುತ್ತೇವೆ.

# ಸಾಮರ್ಥ್ಯದಲ್ಲಿ
# ಸಂಪೂರ್ಣತೆ

ಕ್ರಿಸ್ತನಲ್ಲಿ ಸಂಪೂರ್ಣವಾಗಿರುವುದು ಅಂದರೆ ನಾವು ಸಾಮರ್ಥ್ಯದಲ್ಲಿ ಸಂಪೂರ್ಣರಾಗಿರುವುದು ಮತ್ತು ದೇವರು ತನ್ನ ಮಕ್ಕಳಿಗಾಗಿ ಒದಗಿಸುವದನ್ನು ಹೊಂದುವಲ್ಲಿ ಸಂಪೂರ್ಣರಾಗಿರುವುದು ಎಂದರ್ಥ, ಕ್ರಿಸ್ತನಲ್ಲಿ, ಆತ್ಮಿಕತೆಗೂ ಮತ್ತು ಕ್ರಿಸ್ತನಂತಾಗುವಲ್ಲಿ ಬೆಳೆಯುವದಕ್ಕೂ ಸಮನಾದ ಅವಕಾಶವಿರುವ ಸ್ಥಳವಿದೆ.

ಕ್ರಿಸ್ತನ ಹೊರಗೆ ಒಬ್ಬನು ತನ್ನ ಪಾಪದಿಂದ ದೇವರೊಂದಿಗೆ ಅನ್ಯೋನ್ಯತೆಯಲ್ಲಿರುವ ದರಿಂದ ನಿರ್ಬಂಧಿಸಲ್ಪಟ್ಟಿದ್ದಾನೆ; ಕ್ರಿಸ್ತನಲ್ಲಿ ಯಾವುದೇ ಬೇರ್ಪಡಿಸುವಿಕೆಯು ಉಳಿದು ಕೊಳ್ಳುವುದಿಲ್ಲ, ಯಾಕಂದರೆ ಆತನ ರಕ್ತದಿಂದ ನಮ್ಮ ಹಿಂದಿನ ಪಾಪವು ತೆಗೆದು *ಹಾಕಲ್ಪಡುತ್ತಿದೆ.* ಹೀಗೆ, "ಆತನ ಮುಖಾಂತರ" ಯಾವನಾದರೂ ಕ್ರಿಸ್ತನಲ್ಲಿದ್ದರೆ, ಅವನು ಯೆಹೂದ್ಯನೇ ಆಗಲಿ ಇಲ್ಲವೇ ಅನ್ಯನೇ ಆಗಲಿ, "ಒಂದೇ ಆತ್ಮನಲ್ಲಿ ತಂದೆಯ ಕಡೆಗೆ ಮಾರ್ಗವಿರುತ್ತದೆ" (ಎಫೆಸ 2:18). ಪ್ರವೇಶದ ಈ ಸ್ವಾತಂತ್ರವು ಕೇವಲ ಒಂದು ತೆರೆದ ಬಾಗಿಲು ಆಗಿರುವುದಿಲ್ಲ; ಇದು ಸ್ವಾಗತಿಸುವ ಸಂಕೇತವು ಅದರ ಮೇಲೆ ನೇತಾ ಡುತ್ತಿರುವ ತೆರೆದ ಬಾಗಿಲಾಗಿರುತ್ತದೆ. "ದೇವರ ಸಾನ್ನಿಧ್ಯ ಸೇರುವುದಕ್ಕೆ ನಮಗಿರುವ ಭರವಸವುಳ್ಳ ಧೈರ್ಯವು ಕ್ರಿಸ್ತನಲ್ಲಿ ಇಟ್ಟಿರುವ *ನಂಬಿಕೆಯ ಮೂಲಕ* ಆತನಲ್ಲಿಯೇ ನಮಗೆ ಉಂಟಾಯಿತು" (ಎಫೆಸ 3:12; ಒತ್ತಿ ಹೇಳಿದ್ದು ನನ್ನದು) ಎಂದು ನಾವು ಓದುತ್ತೇವೆ.

"ಬನ್ನಿರಿ ಮತ್ತು ನಮ್ಮನ್ನು ನೋಡಿರಿ!" ಎಂದು ಬಿಟ್ಟು ಹೋಗುವಾಗ ಹೇಳುವದನ್ನು ನೀವು ಬಹಳ ಕೇಳಿರ ಬಹುದು. ಅದು "ಗುಡ್ ಬಾಯ್" ಎಂದು ಹೇಳುವುದರ ಸ್ಥಳಿಕ ಮಾತಿನ ರೀತಿಯಾಗಿದೆ. ಈ ಮಾತುಗಳನ್ನು ಹೇಳಿದವರ ಮನೆಗೆ ಬರಬೇಕೆಂದು ಇದು ನಿರ್ದಿಷ್ಟವಾದ ಆಮಂತ್ರಣವಾಗಿರುವದಿಲ್ಲ. ಇದು ಗಂಭೀರವಾಗಿ ತೆಗೆದುಕೊಳ್ಳ ಲ್ಪಡದ, ಅರ್ಧ ಮನಸ್ಸಿನ ಬೇಡಿಕೆಯಾಗಿದೆ ಎಂದು ನಾವು ತೆಗೆದುಕೊಳ್ಳಬಹುದು. ಸ್ವಾಗತಿಸುವ ದೇವರ ವಾಕ್ಯವು ಸಾಮಾನ್ಯವದದ್ದೂ, ಆಳವಿಲ್ಲದ್ದೂ ಆಗಿರುವುದಿಲ್ಲ, ಯಥಾರ್ಥವಾದ ಅರ್ಥವುಳ್ಳದ್ದಾಗಿದೆ. ಆತನು ನಮ್ಮನ್ನು ತನ್ನ ಅನ್ಯೋನ್ಯತೆಯೊಳಗೆ ಪ್ರೋತ್ಸಾಹಿಸಿದ್ದಲ್ಲದೇ, ವಿವರಸುವಿಕೆಯನ್ನು ದಾಟಿದ ಹಂಬಲದೊಂದಿಗೆ ನಮ್ಮ ಅನ್ಯೋ ನ್ಯತೆಯನ್ನು ಆತನು ಹುಡುಕುತ್ತಾನೆ. ಮರಣಕ್ಕಿಂತ ಬಲವಾದ ಪ್ರೀತಿಯೊಂದಿಗೆ ಆತನ ಹೃದಯವು ನಮ್ಮನ್ನು ತಲುಪುತ್ತದೆ.

ದೇವರ ಮಕ್ಕಳಾಗಿ ನಮಗೆ ಪರಲೋಕದ ಆತ್ಮಿಕ ಉಗ್ರಾಣಕ್ಕೆ ಉಚಿತವಾದ ಪ್ರವೇಶವಿರುವುದರಿಂದ ಪ್ರತಿಯೊಬ್ಬ ಕ್ರೈಸ್ತನು ಯೋಹಾನನೊಂದಿಗೆ ಹೀಗೆ ಹೇಳ ಬಹುದು: "ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ" (1 ಯೋಹಾನ 3:1ಎ).

ಕ್ರಿಸ್ತನಲ್ಲಿ ವಿಮೋಚಿತ ವ್ಯಕ್ತಿಗೆ ಅವನು ಆಯ್ದುಕೊಳ್ಳುವಂತೆ ದೇವರೊ ಂದಿಗೆ, ಕ್ರಿಸ್ತನೊಂದಿಗೆ ಮತ್ತು ಪರಿಶುದ್ಧಾತ್ಮನೊಂದಿಗೆ ನಿಕಟವಾಗಿ ನಡೆಯುವ ಅವಕಾಶವಿರುತ್ತದೆ. ಅನ್ಯೋನ್ಯತೆಯಲ್ಲಿ ಅವನ ಬೆಳವಣಿಕೆಯು ಅವಕಾಶದ ಕೊರತೆ ಯಿಂದ ಇಲ್ಲವೇ ಪೂರ್ಣ ಪ್ರವೇಶದ ಕೊರತೆಯಿಂದ ನಿರ್ಬಂಧಿಸಲ್ಪಡಲಾರದು. ದೇವರ ಸಮೀಪಕ್ಕೆ ಬರುವಲ್ಲಿ ಯಾವುದೇ ಸೋಲು ನಮ್ಮ ಸೋಲಾಗಿರುತ್ತದೆ ಆದರೆ ದೇವರ ಒಂದು ದಶಕವಿರಲಿ, ಒಂದು ನಿಮಿಷವಿರಲಿ ಇಲ್ಲವೇ ಒಂದು ತಿಂಗಳು ಇರಲಿ, ಸ್ವತಂತ್ರವಾಗಿ ನಮ್ಮ ತಂದೆಯ ಬಳಿಗೆ ಬರಲು ನೀವೆಲ್ಲರೂ ಕ್ರಿಸ್ತನಲ್ಲಿ ಸಮಾನರಾಗಿದ್ದೇವೆ.

"ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ" (ಗಲಾತ್ಯ 3:28) ಎಂದು ಪೌಲನು ಬರೆದನು. ನಾವು ಸತ್ಯದಲ್ಲಿ, ಅನ್ಯೋನ್ಯತೆಯಲ್ಲಿ, ದೇವರನ್ನು ಸಮೀಪಿಸುವುದರಲ್ಲಿ ಮತ್ತು ರಕ್ಷಣೆಯಲ್ಲಿ ನಾವು ಒಂದುಗೂಡಿದ್ದೇವೆ; ಆದುದರಿಂದ, ನಾವು ನಿಜವಾಗಿಯೂ ಕ್ರಿಸ್ತನಲ್ಲಿ ಒಂದಾಗಿದ್ದೇವೆ.

ಸೌಕರ್ಯವು ಸ್ವಾಸ್ಯವಾಗಿರುವ *ಅಗತ್ಯತೆಯಿಲ್ಲ* ಎಂಬುದನ್ನು ನಾವು ಜ್ಞಾಪಕದಲ್ಲಿಟ್ಟು ಕೊಳ್ಳತಕ್ಕದ್ದು, ಮತ್ತು ಪ್ರವೇಶಿಸುವ ಹಕ್ಕು ನಾವು ಪ್ರವೇಶಿಸಿದ್ದೇವೆ ಎಂದು ಅರ್ಥವಾಗುವ ಅಗತ್ಯತೆಯೂ ಆಗಿರುವುದಿಲ್ಲ. ಒಬ್ಬ ಮನುಷ್ಯನು ತನ್ನ ಕೆಲವು ಜನ ಸ್ನೇಹಿತರನ್ನು ನೋಡುವುದಕ್ಕಾಗಿ ಅಟ್ಲಾಂಟಿಕ ಸಾಗರವನ್ನು ದಾಟಿ ಹೋಗಲು ಯೋಚಿಸಿದ್ದರ ಬಗ್ಗೆ ನಾನು ಓದಿದ್ದೇನೆ. ಹಡಗಿನ ಪ್ರಯಾಣದ ಟಿಕೇಟಿಗಾಗಿ ಹಣ ಕೂಡಿಸಲು ಕಷ್ಟಪಡಬೇಕಾಗಿತ್ತು. ಕೆಲವು ವರ್ಷ ತನ್ನ ಹೆಚ್ಚಿನ ಹಣವನ್ನು ತೆಗೆದಿಟ್ಟು ಪ್ರಯಾಣಕ್ಕೆ ಮಾತ್ರ ಸಾಕಷ್ಟು ಹಣವನ್ನು ಸಂಗ್ರಹಿಸಿದನು, ಅವನು ತನ್ನ ಟಿಕೆಟನ್ನು ಪಡೆದುಕೊಂಡು, ದೀರ್ಘವಾದ ಪ್ರಯಾಣಕ್ಕೆ ಸಿದ್ಧನಾದನು. ಟಿಕೆಟಿನ ಬೆಲೆಯಲ್ಲಿ ಊಟಗಳ ಖರ್ಚು ಸೇರಿ ರುವದನ್ನು ತಿಳಿಯದೇ ತನ್ನ ಬ್ಯಾಗೇಜಿನಲ್ಲಿ ಚೀಜ ಮತ್ತು ಕೆಲವು ಒಣಬಿಸ್ಕೀಟುಗಳನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದನು. ತನ್ನ ಪ್ರಯಾಣದ ಅವಧಿಯಲ್ಲಿ ಅದರಿಂದ ಇಳಿದುಕೊ ಳ್ಳಬೇಕೆಂದು ಯೋಜಿಸಿದ್ದನು. "ಯಾರಾದರೂ ಒಂದೆರಡು ವಾರಕ್ಕಾಗಿ ಏನನ್ನಾದರೂ ಪಡೆದುಕೊಳ್ಳಬಹುದು" ಎಂದು ಅವನು ಯೋಚಿಸಿದನು. ಅಟ್ಲಾಂಟಿಕಿನ ಮಧ್ಯದಲ್ಲಿ, ಆಕಸ್ಮಿಕವಾಗಿ ಯಾರೋ ಒಬ್ಬರು ಅವನಿಗೆ ಡೈನಿಂಗ್ ಹಾಲಿನಲ್ಲಿ ಲಭ್ಯವಿರುವ ಬಿಸಿ ಊಟಗಳೂ ಅವನ ಟಿಕೇಟಿನ ಕ್ರಮದಲ್ಲಿ ಒಳಗೊಂಡಿರುವವು ಎಂದು ತಿಳಿಸಿದರು.

ಈ ಮನುಷ್ಯನು, ತಿಳುವಳಿಕೆಯ ಕೊರತೆಯ ಮುಖಾಂತರ, ತನ್ನ ಸೌಕರ್ಯಗಳ ಕೆಳಗೆ ಜೀವಿಸುತ್ತಿದ್ದನು. ಇತರ ಪ್ರಯಾಣಿಕರಂತೆಯೇ ಅವನಿಗ ಡೈನಿಂಗ್ ಹಾಲಿಗೆ ಹಕ್ಕು ಇತ್ತು. ಆದರೆ ಅವನು ತಾನು ಕೊಂಡುಕೊಂಡದ್ದರ ಲಾಭವನ್ನು ತೆಗೆದುಕೊಳ್ಳುತ್ತಿರಲಿಲ್ಲ; ಅವನು ತನ್ನ ಸ್ವಾಸ್ಯಗಳನ್ನು ಸ್ವಾಸ್ಯವಾಗಿ ಹೊಂದಿಕೊಂಡಿರುತ್ತಿರಲಿಲ್ಲ. ಅವನು ತನ್ನ ಅಂತಸ್ಸತ್ವವನ್ನು ಹಿಡಿದುಕೊಂಡಿರಲಿಲ್ಲ.

ಪುರಾತನ ಕಾಲದಲ್ಲಿ ಇಸ್ರಾಯೇಲ್ಯರು ಕಾನಾನ ದೇಶವನ್ನು ಸಮೀಪಿಸಿದಾಗ, "ನಾನು ದೇಶವನ್ನು ಕೊಡುವೆನು" (ಯೆಹೋಶುವ 1:2) ಎಂಬ ದೇವರ ವಾಗ್ದಾನವನ್ನು ಸ್ವೀಕರಿಸಿದರು. ಅವರು ಯೊರ್ದನ್ ನದಿಯನ್ನು ದಾಟಿಹೋಗಿ ದೇವರು ಅವರಿಗೆ ಕೊಟ್ಟ ಸ್ವಾಸ್ಯವನ್ನು ಹೊಂದಿಕೊಂಡಾಗ ಸಂತೋಷದ ದಿನವು ಬೇಗನೇಬಂದಿತು. "ನಾನು ದೇಶವನ್ನು ನಿಮಗೆ ಕೊಟ್ಟಿದ್ದೇನೆ, ಅದನ್ನು ನೀವು ವಶಪಡಿಸಿಕೊಳ್ಳಬೇಕು" (ಯೆಹೋಶುವ 1:11) ಎಂದು ದೇವರು ಅವರಿಗೆ ಹೇಳಿದನು.

ದೇವರು ಕ್ರಿಸ್ತನಲ್ಲಿ ನಮಗೆ ಅದೇ ಆದೇಶವನ್ನು ಕೊಟ್ಟಿರುವನು: "ನನ್ನ ಎಲ್ಲಾ ಆಶೀರ್ವಾದಗಳಿಗೆ ನಿಮಗೆ ಮಾರ್ಗ ಮಾಡಿರುವೆನು. ಜ್ಞಾನದ ಮತ್ತು ತಿಳುವಳಿಕೆಯ, ನನ್ನೊಂದಿಗೆ ನಿಕಟವಾದ ಅನ್ಯೋನ್ಯತೆಯ ಮತ್ತು ನನ್ನ ಬಲದ ಮುಖಾಂತರ ಜಯಗಳ ಸ್ವಸ್ಯವು ಕ್ರಿಸ್ತನಲ್ಲಿ ನಿಮಗೆ ಲಭ್ಯವಿರುವುದು; ಆದರೆ ನೀವು ಕೈಚಾಚಿ ಅವುಗಳನ್ನು ತೆಗೆದುಕೊಳ್ಳಬೇಕು. ನಾನು ನಿಮಗೆ ದೇಶವನ್ನು ಕೊಟ್ಟಿರುವೆನು, ಆದರೆ ನೀವು ಅದನ್ನು ವಶಪಡಿಸಿಕೊಳ್ಳತಕ್ಕದ್ದು."

ಯೇಸುವಿನ ಆತ್ಮಿಕ ದೇಹದಲ್ಲಿ ಇರುವವರು, ಸಾಮರ್ಥ್ಯದಲ್ಲಿ ಸಂಪೂರ್ಣವಾಗಿರುವರು. ಪೌಲ, ಪೇತ್ರ ಮತ್ತು ಯೋಹಾನರು ಮಾಡಿದಂತೆ ದೇವರೊಂದಿಗೆ ನಿಕಟ

ವಾಗಿ ನಡೆಯುವ ಅವಕಾಶವು ನಮಗೆ ಇರುವುದು, ದೇವರೊಂದಿಗೆ ನಮ್ಮ ಅನ್ಯೋನ್ಯತೆಗೆ ಕೇವಲ ಆತಂಕಗಳು ನಾವೇ ಹೊರಿಸಿ ಕೊಂಡವುಗಳಾಗಿವೆ. ಅವು ಪಾಪ, ಮೈಗಳ್ಳತನ, ಸ್ವಾರ್ಥ ಮತ್ತು ಗರ್ವದಂಥವುಗಳಾಗಿವೆ. ಮಾನವನಿಗೆ ಸಂಪೂರ್ಣ ಪ್ರಕಟನೆಯಾದ ಬೈಬಲ್ ನಮ್ಮ ಕೈಗಳಲ್ಲಿದೆ. ಪ್ರಾರಂಭಿಕವಾಗಿ ಪರಿಶುದ್ಧ ಬರಹಗಳಿಗೆ ವಿಧೇಯರಾಗಿ, ಕ್ರಿಸ್ತನೊಳಗೆ ಬಂದಿರುವ ನಾವು ಈಗ ನಮ್ಮ ಜೀವನಗಳ ಉಳಿದ ಭಾಗಕ್ಕಾಗಿ ಆತನ ಚಿತ್ತದ ನಮ್ಮ ಜ್ಞಾನದಲ್ಲಿ ಬೆಳೆಯುವೆವು. ಪರಿಶುದ್ಧಾತ್ಮನು ನಮ್ಮಲ್ಲಿ ವಾಸಿಸುವನು ಮತ್ತು ನಮಗೆ ಪ್ರಾರ್ಥನೆಯ ಸದಾವಕಾಶವಿರುವುದು (ಗಲಾತ್ಯ 4:6). ನಾವೆಂದೂ ದೇವರೊಂದಿಗಿನ ನಮ್ಮ ಸ್ವಾಗತವನ್ನು ಕಳೆದುಕೊಳ್ಳುವದಿಲ್ಲ; ನಾವು ಆತನಿಗೆ ಮಾಡಿದ ಪ್ರಾರ್ಥನೆಗಳನ್ನು ಕೇಳದಷ್ಟು ಆತನು ಎಂದೂ ಕಾರ್ಯನಿರತನಾಗಿರುವುದಿಲ್ಲ, ಅನುದಿನವೂ ನಮ್ಮೊಂದಿಗೆ ಮಾತನಾಡಲು ಆತನು ಬಯಸುತ್ತಾನೆ, ಮತ್ತು ಆತನ ಅನ್ಯೋನ್ಯತೆಯ ಮೌಲ್ಯವನ್ನೂ ಆನಂದವನ್ನೂ ಗುರುತಿಸುವುದಕ್ಕಾಗಿ ಆತನು ನಮಗಾಗಿ ತಾಳ್ಮೆಯಿಂದ ಕಾದುಕೊಂಡಿರುತ್ತಾನೆ. ಆತನಿಗೆ ಆನಂದಕರವಾದ ಮತ್ತು ಸ್ವೀಕಾರವಾದ ಆರಾಧನೆಯನ್ನು, ಆತನನ್ನು ಸಂತುಷ್ಟಿಪಡಿಸುವ ಹಾಗೂ ಮಧುರವಾಸನೆಯಂತೆ ಆತನ ಮುಂದೆ ಬರುವ ಆರಾಧನೆಯ ಹಾಗೂ ಸ್ತೋತ್ರದ ಯಜ್ಞವನ್ನು ಅನುದಿನವೂ ಆತನಿಗೆ ನಾವು ಅರ್ಪಿಸಬಹುದು ಕ್ರಿಸ್ತನ ಮುಖಾಂತರ, ದೇವರ ಸರ್ವಶ್ರೇಷ್ಠತೆಗೆ ತಲುಪುವ ಸಮರ್ಥ್ಯವು ನಮಗೆ ಕೊಡಲ್ಪಟ್ಟಿದೆ.

## ಮುಕ್ತಾಯ

ನಾವು ಕ್ರಿಸ್ತನಲ್ಲಿ ಪೂರ್ಣರಾಗಿದ್ದೇವೆ - ಕ್ಷಮಾಪಣೆಯಲ್ಲಿ, ಒದಗಿಸುವಿಕೆಯಲ್ಲಿ, ಮತ್ತು ಸಾಮರ್ಥ್ಯದಲ್ಲಿ ಸಂಪೂರ್ಣರಾಗಿರುವೆವು ಎಂದು ತಿಳಿಯುವುದು ನಮಗೆ ಎಂಥಾ ವ್ಯಕ್ತಪಡಿಸಲಾಗದ ಆನಂದವನ್ನು ತರುವುದು. ಕ್ರಿಸ್ತನಲ್ಲಿಯ ನಮ್ಮ ನಿಲುವಿಗಿಂತ ಹೆಚ್ಚು ಉತ್ತಮವಾದ ಸ್ಥಳದಲ್ಲಿ ನಾವಿರಲಾರೆವು; ಕ್ರಿಸ್ತನಲ್ಲಿ ನಾವು ಪಡೆದುಕೊಳ್ಳುವದಕ್ಕಿಂತ ಹೆಚ್ಚು ಒದಗಿಸುವಿಕೆಗಳನ್ನು ನಾವು ಹೊಂದಲಾರೆವು; ಕ್ರಿಸ್ತನಲ್ಲಿ ನಮಗೆ ಇರುವ ಅವಕಾಶಕ್ಕಿಂತ ಹೆಚ್ಚು ದೊಡ್ಡ ಅವಕಾಶವು, ಆತ್ಮಿಕ ಬೆಳವಣಿಗೆಗಾಗಿ ಇರಲಾರದು. ನಾವು ಶಿಖರಕ್ಕೆ, ಅತೀ ಶ್ರೇಷ್ಠವಾದದ್ದಕ್ಕೆ, ಅತ್ಯುನ್ನತವಾದ, ಅತಿದೊಡ್ಡ ಒಳ್ಳೆಯತನಕ್ಕೆ ನಾವು ಬಂದಿದ್ದೇವೆ. ಸಮಸ್ತವನ್ನು ಒಂದುಗೂಡಿಸುವಂಥದ್ದಕ್ಕೆ ತಲುಪಿದ್ದೇವೆ. ಈ ಕಾರಣದಿಂದಲೇ ಪೌಲನು ಹೀಗೆ ಬರೆದನು, "ತಂದೆಯಾದ ದೇವರು ಆತನಲ್ಲಿ ತನ್ನ ಸರ್ವಸಂಪೂರ್ಣತೆಯು ವಾಸವಾಗಿರಬೇಕೆಂತಲೂ ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನಪಡಸಿ ಕೊಳ್ಳಬೇಕೆಂತಲೂ ನಿಷ್ಕರ್ಷೆಮಾಡಿದನು" (ಕೊಲೊಸ್ಸೆ 1:19, 20).

ಒಂದು ನೂರು ಮೀಟರ್ ಓಟದಲ್ಲಿ ನೀವು ಬಂಗಾರ ಪದಕ ಗೆದ್ದುಕೊಂಡಿರೆಂದೂ, ನೀವು ಆ ಪಂದ್ಯಾಟದಲ್ಲಿ ಜಗತ್ತಿನಲ್ಲಿ ಅತ್ಯುತ್ತಮರೆಂದು ತಿಳಿದುಕೊಂಡರೆ ಹೇಗಿರುತ್ತದೆ? ನೀವು ಯುನೈಟೆಡ್ ಸ್ಟೇಟ್ಸ್‌ದ ಪ್ರಸಿಡೆಂಟರಾಗಿದ್ದರೆ ಮತ್ತು ಅಮೇರಿಕಾದಲ್ಲಿ ನೀವು ಅತೀ ಉನ್ನತ ಹುದ್ದೆಯನ್ನು ಅಲಂಕರಿಸಿದ್ದರೆಂದು ತಿಳಿದರೆ ಏನಾಗುತ್ತದೆ? ನೀವು ಜಗತ್ತಿನಲ್ಲಿಯೇ ಅತೀ ಐಶ್ವರ್ಯವಂತ ವ್ಯಕ್ತಿಯಾಗಿದ್ದರೆ ಮತ್ತು ನಿನಗಿಂತ ಬೇರೆ ಯಾರಿಗೂ ಹೆಚ್ಚು ಹಣ ಇರುವುದಿಲ್ಲ ಎಂದು ತಿಳಿದು ಬಂದರೆ ಏನಾಗುತ್ತದೆ? ನೀವು ಜೀವನದ ಶಿಖರದ ಮೇಲೆ ಇರುವಿರೋ? ಅದು ನಿನಗಾಗಿ ಜೀವಿತವನ್ನು ಸಂಪೂರ್ಣವಾಗಿ ಮಾಡುವುದೋ? ಇಲ್ಲ ಎಂದು ನಾನು ನಿರೀಕ್ಷಿಸುತ್ತೇನೆ.

ಕ್ರಿಸ್ತನಲ್ಲಿರುವ ಪ್ರತಿಯೊಬ್ಬನೂ, ಅವನ ಇಲ್ಲವೇ ಆಕೆಯ ಜೀವಿಸುವ ಪರಿಸ್ಥಿತಿಗಳು ಎಷ್ಟೋ ದೀನತೆಯುಳ್ಳವುಗಳಾಗಿದ್ದರೂ ಹಾಗೂ ಉಳಿದ ಜಗತ್ತಿಗೆ ಅವನು ಅಥವಾ ಆಕೆಯು ತಿಳಿಯದವನಾಗಿರದೇ ಇದ್ದರೂ, ದೇವರ ದೃಷ್ಟಿಕೋನದಿಂದ ಅತ್ಯುನ್ನತ ಮಹತ್ವದ ಸ್ಥಾನದಲ್ಲಿರುವರು. ಸುವರ್ಣ ಪದಕ ಪಡೆದವನೂ, ಪ್ರೆಸಿಡೆಂಟನೂ ಇಲ್ಲವೇ ಅತೀ ಐಶ್ವರ್ಯವುಳ್ಳ ವ್ಯಕ್ತಿಯು ಆಗಿದ್ದರೂ ಕ್ರಿಸ್ತನಲ್ಲಿ ಕೀಳು ಮಟ್ಟದ ಜೀವಿಯಾಗಿರುವನು. ಆತನ ಆತ್ಮಿಕ ದೇಹದ ಸದಸ್ಯನಾಗಿ, ನಿನಗೆ ಅದೆಲ್ಲವೂ ಇರುವುದು. ಕ್ರೈಸ್ತಯುಗದಲ್ಲಿ ಇರುವ ಯಾವನಿಗಾದರೂ ಲಭ್ಯವಿರುವಂತೆ ಮಾಡಲು ದೇವರು ಹುಡುಕುತ್ತಿರುವ ಎಲ್ಲದಕ್ಕೂ ನಿನಗೆ ಮಾರ್ಗವಿರುವುದು.

ನೀನು ಕ್ರಿಸ್ತನಲ್ಲಿದ್ದರೆ ನಿನಗಿಂತ ಹೆಚ್ಚಾಗಿ ಬೇರೆ ಯಾರಿಗೂ ವಿಫುಲವಾಗಿ ಒದಗಿಸಲ್ಪಡುವುದಿಲ್ಲ; "ಯಾಕಂದರೆ ಸಮಸ್ತವೂ ನಿಮ್ಮದು; ಪೌಲನಾಗಲಿ, ಅಪೊಲ್ಲೋಸನಾಗಲಿ, ಕೇಫನಾಗಲಿ, ಲೋಕವಾಗಲಿ ಜೀವವಾಗಲಿ ಮರಣವಾಗಲಿ, ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ ಸಮಸ್ತವೂ ನಿಮ್ಮದೇ; ನೀವಂತೂ ಕ್ರಿಸ್ತನವರು, ಕ್ರಿಸ್ತನು ದೇವರವನು" (1 ಕೊರಿಂಥ 3:21ಬಿ-23). ನೀನು ಕ್ರಿಸ್ತನಲ್ಲಿ ಇರದಿದ್ದರೆ, ನಿನಗಿಂತ ಹೆಚ್ಚು ಬಡತನದಲ್ಲಿ ಇರುವವರು ಯಾರೂ ಇರುವುದಿಲ್ಲ: "... ಕ್ರಿಸ್ತನ್ನು ಸೇರಿದವರಾಗಿದ್ದು, ಇಸ್ರಾಯೇಲ್ಯ ಹಕ್ಕಿನಲ್ಲಿ ಪಾಲಿಲ್ಲದವರೂ [ಅಬ್ರಹಾಮನಿಗೆ ಉಂಟಾದ] ವಾಗ್ದಾನಕ್ಕೆ ಸಂಬಂಧವಾದ ಒಡಂಬಡಿಕೆಗಳಲ್ಲಿ ಸೇರದವರೂ ಈ ಲೋಕದಲ್ಲಿ ಯಾವ ನಿರೀಕ್ಷೆಯಿಲ್ಲದವರೂ ದೇವರನ್ನರಿಯದವರೂ ಆಗಿದ್ದೀರಿ" (ಎಫೆಸ 2:12).

ಇಡೀ ವಿಷಯದ ಮುಕ್ತಾಯವನ್ನು ಕೇಳೋಣ: *ಕ್ರಿಸ್ತನಿಲ್ಲದೆ, ಮೌಲ್ಯವುಳ್ಳ ಯಾವುದೂ ನಮ್ಮಲಿಲ್ಲ; ಆತನೊಂದಿಗೆ, ನಿಜವಾದ ಬೆಲೆಯುಳ್ಳ ಪ್ರತಿಯೊಂದೂ ಇರುತ್ತದೆ!*

© 2009 Truth for Today